# ಬಾರಯ್ಯ ರಂಗ ಬಾರಯ್ಯ ಕೃಷ್ಣ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 130.
3. **Note:** This song is not available in the books of Shri Betageri Krishna Sharma and Shri Bengeri Huchha Rayaru.
4. Note: Lyrics given here are as per Ref. 1. The wordings in Ref. 2 are same as in Ref. 1 except few differences which are not considered here. Singer has followed these lyrics.

ರಾಗ: ಶಂಕರಾಭರಣ ತಾಳ: ಅಟ

ಬಾರಯ್ಯ ರಂಗ ಬಾರಯ್ಯ ಕೃಷ್ಣ
ಬಾರಯ್ಯ ಸ್ವಾಮಿ ಬಾರಯ್ಯ || ಪ ||

ವಾರಣ ಭಯವ ನಿವಾರಣ ಮಾಡಿದ
ಕಾರುಣ್ಯ ನಿಧಿಯೆನ್ನ ಹೃದಯ ಮಂದಿರಕೆ || ಅಪ ||

ಮೊದಲಿಂದ ಬರಬಾರದೆ ನಾನು ಬಂದೆ
ತುದಿ ಮೊದಲಿಲ್ಲದ್ದೊಂದಿದೆ ಅಪನಿಂದೆ
ಇದು ಗೆದ್ದು ಕಳೆದು ಪೋಪುದು ಹೇಗೆ ಮುಂದೆ
ಪದುಮನಾಭ ತಪ್ಪು ಕ್ಷಮಿಸಯ್ಯ ತಂದೆ || ೧ ||

ಹೆಣ್ಣು ಹೊನ್ನು ಮಣ್ಣಿನಾಸೆಯೊಳಿದ್ದು
ಪುಣ್ಯ ಪಾಪಂಗಳ ನಾನರಿತಿದ್ದು
ಅನ್ಯಾಯವಾಯಿತು ಇದಕೇನು ಮದ್ದು
ನಿನ್ನ ಧ್ಯಾನವ ಕೊಡು ಹೃದಯದೊಳಿದ್ದು || ೨ ||

ಇಂದೆನ್ನ ಪೂರ್ವ ಪಾಪಂಗಳ ಕಳೆದು

ಮುಂದೆನ್ನ ಜನ್ಮ ಸಫಲವನ್ನು ಗೈದು
ತಂದೆ ಪುರಂದರ ವಿಠಲ ನೀನೊಲಿದು
ಎಂದೆಂದಿಗಾನಂದ ಸುಖವನ್ನು ಸುರಿದು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವಾರಣ** = ಆನೆ, ಅಷ್ಟ ಮದಗಳು

**ಮೊದಲಿಂದ ಬರಬಾರದೆ** – ಜೀವರ ಸ್ವರೂಪ ಜ್ಞಾನವನ್ನು ಮರೆಮಾಚಿ, ಸ್ವರೂಪಾನಂದವನ್ನು ತಪ್ಪಿಸಲು 'ಆದ್ಯಪರಾಧ ಅನ್ಯಥಾಜ್ಞಾನ'ವೇ ಕಾರಣ; ಅದರಿಂದ ಹರಿಯ ವಿಸ್ಮರಣೆ. ಇದಿರದಿದ್ದರೆ ಜೀವರು ಸಂಸಾರಾವಸ್ಥೆಗೆ ಬರುತ್ತಿರಲಿಲ್ಲ.

**ಮುಂದೆನ್ನ ಜನ್ಮ ಸಫಲವನ್ನು** – ಜನ್ಮ ಸಾಫಲ್ಯವನ್ನು ; ಲಿಂಗ ದೇಹದ ಸಂಬಂಧವಾಗುವುದು (ಜನ್ಮ) ಜೀವರ ಸ್ವರೂಪದ ಉದ್ಧಾರಕಾಗಿ; ಇದೇ ಜನ್ಮದ ಫಲ. ಇದು ಒದಗುವುದು ಬಿಂಬಾಪರೋಕ್ಷದಿಂದ ಅದಕ್ಕೆ ಸಾಧನೆಯಾಗಿ ಏಕಾಂತ ಭಕ್ತಿಯ ಅಗತ್ಯವಿದೆ. ಇದನ್ನು ನೀಡಬೇಕಾದವನೂ ಪರಮಾತ್ಮನೇ.

**ಎಂದೆಂದಿಗಾನಂದ** – ಮುಕ್ತರ ಆನಂದ; ಅಪ್ರಾಕೃತವಾದದ್ದು.

**Classification:** Keethane
**Ankita:** tande purandara vittala
**Location:** NA
**Category:** Samsara Chitragalu
**Sub-Category:** ranga, Krishna, kshame, hennu, punya, papa, Dhyana, hrudaya, janma, sukha, gaja, Ananda, bimba roop, bimba,
**Pravachana:** NA
**Explanation:** NA